AUGUST 27, 2026

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ನಾಳೆ, ರಾಷ್ಟ್ರೀಯ ಕ್ರೀಡಾ ದಿನ. ಹಾಕಿ ಮಾಂತ್ರಿಕ, ಮೇಜರ್ ಧ್ಯಾನಚಂದ ಅವರ, ಜನ್ಮ ದಿನಾಚರಣೆ. ರಾಷ್ಟ್ರೀಯ ಕ್ರೀಡಾ ದಿನದ ಪೂರ್ವಭಾವಿಯಾಗಿ, ಕೇಂದ್ರ ಕ್ರೀಡಾ ಸಚಿವಾಲಯ ಆಯೋಜಿಸಿದ, 'ಖೇಲೋ ಇಂಡಿಯಾ; ಖೇಲ್ ಕಿ ಬಾತ್, ಪಿ.ಎಂ. ಕೆ ಸಾಥ್ ಸಂವಾದ' ಕಾರ್ಯಕ್ರಮದಲ್ಲಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಇಂದು ಬೆಳಗ್ಗೆ 11 ಗಂಟೆ, 30 ನಿಮಿಷದಿಂದ, ಹೊಸ ದಿಲ್ಲಿಯಿಂದ, ವರ್ಚುವಲ್ ವೇದಿಕೆಯಲ್ಲಿ, ಮಾತನಾಡುತ್ತಿದ್ದಾರೆ.

<><><>

ಐ.ಐ.ಟಿ., ಐ.ಐ.ಎಂ ಹಾಗೂ ಏಮ್ಸ್ ಸೇರಿದಂತೆ, ದೇಶಾದ್ಯಂತ ಸಾವಿರದ, 500ಕ್ಕೂ ಹೆಚ್ಚು, ಶೈಕ್ಷಣಿಕ ಸಂಸ್ಥೆಗಳಲ್ಲಿ ಹಾಗೂ ಧಾರವಾಡ ಜಿಲ್ಲೆ, ಹುಬ್ಬಳ್ಳಿಯ, ಜೆ.ಜಿ. ಕಾಲೇಜ್ ಆಫ್ ಕಾಮರ್ಸ್ ಸಭಾಂಗಣ ಸೇರಿದಂತೆ, ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ಖೇಲೋ ಇಂಡಿಯಾ ನೇರ ಸಂವಾದ ಕಾರ್ಯಕ್ರಮ, ಪ್ರಸಾರಗೊಳ್ಳುತ್ತಿದೆ.

<><><>

'ಯುವಜನತೆಯ ಆಶೋತ್ತರಗಳನ್ನು, ದೇಶದ ಕ್ರೀಡಾ ನೀತಿಯ ಭಾಗವಾಗಿಸಲು, ಯೋಜನಾಬದ್ಧ ಕ್ರಮ ಕೈಗೊಳ್ಳಲಾಗುತ್ತಿದೆ ಎಂದ, ಪ್ರಧಾನಮಂತ್ರಿಯವರು, ಕ್ರೀಡಾ ಪಯಣ, ದೇಶದ ಒಲಿಂಪಿಕ್ಸ್ ಮಹತ್ವಾಕಾಂಕ್ಷೆ, ಯುವ ನಾಯಕತ್ವ, ವಿಕಸಿತ ಭಾರತ ಹಾಗೂ ನಶೆ ಮುಕ್ತ ಯುವಜನತೆ' ಹೀಗೆ, ಒಟ್ಟು 5 ಬಿಂದುಗಳ ಮೇಲೆ ಅವರು ಮಾತನಾಡುತ್ತಿದ್ದಾರೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಧ್ವನಿ 45 ಸೆಕೆಂದುಗಳು

<><><>

ಇಂದು ವಿಶ್ವ ಕೆರೆಗಳ ದಿನಾಚರಣೆ. 'ಕೆರೆಗಳನ್ನು ಉಳಿಸಿ; ನೀರನ್ನು ಸಂರಕ್ಷಿಸಿ, ಭವಿಷ್ಯವನ್ನು ರಕ್ಷಿಸಿ, ಕೆರೆಗಳು ಪ್ರಕೃತಿಯ ಜೀವನಾಡಿ' ಎಂಬ ಧ್ಯೇಯದೊಂದಿಗೆ, ಸಾಮುದಾಯಿಕ ಸಹಭಾಗಿತ್ವದಲ್ಲಿ, ಕೆರೆಗಳ ಸ್ವಚ್ಛತೆ ಹಾಗೂ ಜನ ಜಾಗೃತಿ ಕಾರ್ಯಕ್ರಮಗಳು, ನಾಡಿನಾದ್ಯಂತ ಹಲವೆಡೆ ಆಯೋಜಿತವಾಗಿವೆ.

<><><>

ನೇಪಾಳ ಪ್ರವಾಸಕ್ಕೆ ತೆರಳಿರುವ, ಕರ್ನಾಟಕದವರು ಸಂಪರ್ಕಕ್ಕೆ ಸಿಗದಿದ್ದರೆ, ಶುಲ್ಕ ರಹಿತ ಸಹಾಯವಾಣಿ, 1070 ಅಥವಾ 08022 253707 ಕ್ಕೆ ಕರೆ ಮಾಡಿ, ಮಾಹಿತಿ ನೀಡುವಂತೆ, ಕಂದಾಯ ಇಲಾಖೆ ಸೂಚಿಸಿದೆ.

<><><>

ಮಾನಸ ಸರೋವರ ಯಾತ್ರೆಗಾಗಿ, ನೇಪಾಳಕ್ಕೆ ತೆರಳಿದ್ದ, ಕಲಬುರಗಿ ಜಿಲ್ಲೆ, ಚಿಂಚೋಳಿ ತಾಲೂಕು, ಕೋಡ್ಲಿ ಗ್ರಾಮದ, ಮಲ್ಲಿನಾಥ ಹಾಗೂ ಕನಕಪುರದ ಸಂಗಮೇಶ, ನೇಪಾಳದ ಬೇಟರವಾಟಿಯಲ್ಲಿ ಸುರಕ್ಷಿತವಾಗಿದ್ದಾರೆ ಎಂದು, ವರದಿಯಾಗಿದೆ.

<><><>

ಪಶ್ಚಿಮಘಟ್ಟ ವ್ಯಾಪ್ತಿಯ, ರಾಜ್ಯದ 10 ಜಿಲ್ಲೆಗಳ, ಸಾವಿರದ 4 ನೂರಾ 49 ಗ್ರಾಮಗಳು, ಪರಿಸರ ಸೂಕ್ಷ್ಮ ಪ್ರದೇಶ ಎಂದು, ಕೇಂದ್ರ ಅಧಿಸೂಚನೆ ಹೊರಡಿಸಿದ ಹಿನ್ನೆಲೆ, ಸೆಪ್ಟೆಂಬರ್‌ನಲ್ಲಿ ವಿಶೇಷ ಸಚಿವ ಸಂಪುಟ ಸಭೆ ನಡೆಯಲಿದೆ ಎಂದು, ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ, ಬೆಂಗಳೂರಿನಲ್ಲಿ ತಿಳಿಸಿದ್ದಾರೆ. ಒಂದು ದಿನದ, ವಿಶೇಷ ಅಧಿವೇಶನ ನಡೆಸುವ ಬಗ್ಗೆಯೂ, ಚಿಂತಿಸಲಾಗಿದೆ ಎಂದು, ಅವರು ಸ್ಪಷ್ಟಪಡಿಸಿದರು.

<><><>

ಪರವಾನಗಿ ಪಡೆದು, ಹೋಂ ಸ್ಟೇ ನಡೆಸುವುದು ಕಡ್ಡಾಯ; ಕಾನೂನು ಬಾಹಿರವಾಗಿ ಹೋಂ ಸ್ಟೇ ನಡೆಸಿದರೆ, ಕಾನೂನು ಪ್ರಕಾರ, ಕ್ರಮ ಜರುಗಿಸುವುದಾಗಿ, ವಿಜಯನಗರ ಜಿಲ್ಲೆ, ಹೊಸಪೇಟೆ ತಾಲೂಕು, ಹಂಪಿ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ, ಇ.ಬಾಲಕೃಷ್ಣಪ್ಪ, ಕಟ್ಟುನಿಟ್ಟಾಗಿ ಸೂಚಿಸಿದ್ದಾರೆ. ವಿಶ್ವ ಪಾರಂಪರಿಕ ತಾಣ ಹಂಪಿ, ಹೊಸ ಹಂಪಿ, ಜನತಾ ಬಜಾರ್ ಹಾಗೂ ಕಡ್ಡಿರಾಂಪುರ ಮತ್ತು ಕಮಲಾಪುರದಲ್ಲಿ, ಅನಧಿಕೃತ ಹೋಂ ಸ್ಟೇಗಳನ್ನು ಪರಿಶೀಲಿಸಿ, ಅವರು ಮಾತನಾಡಿದರು.

<><><>

ಶ್ರೀ ರಾಘವೇಂದ್ರ ಸ್ವಾಮಿಗಳ, 355ನೇ ಆರಾಧನಾ ಮಹೋತ್ಸವದ ಅಂಗವಾಗಿ, ರಾಯಚೂರಿನ, ಮಂಚಾಲೆಯ ಮಂತ್ರಾಲಯದ, ಶ್ರೀ ಮಠದಲ್ಲಿ, ಇಂದಿನಿಂದ ಸೆಪ್ಟೆಂಬರ್ 2ನೇ ತಾರೀಖಿನ ವರೆಗೆ, ಸಪ್ತ ರಾತ್ರೋತ್ಸವ ಜರುಗಲಿದೆ. ಪೀಠಾಧಿಪತಿ ಶ್ರೀ ಸುಭುದೇಂದ್ರ ತಿರ್ಥರು, ಇಂದು ಸಪ್ತ ರಾತ್ರೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಸೆಪ್ಟೆಂಬರ್ 1 ರಂದು, ಶ್ರೀ ಸುಜ್ಞಾನೇಂದ್ರ ತೀರ್ಥರ, ಆರಾಧನಾ ಮಹೋತ್ಸವ ನಡೆಯಲಿದೆ.

<><><>

ಭಗವಂತನ ಅನುಗ್ರಹದ ಸಂಕೇತವೇ ಪುಷ್ಪ. ತಾನೇ ಅರಳಿಸಿದ ಪುಷ್ಪಗಳಿಂದ ಪೂಜೆಗೊಳ್ಳುತ್ತಿರುವ, ಭಗವಂತನ ಕೃಪೆಯಿಂದ, ದಯೆ, ಕ್ಷಮೆ ಮತ್ತು ಜ್ಞಾನದಂತಹ, 8 ಪುಷ್ಪಗಳನ್ನು, ನಮ್ಮ ನಿತ್ಯ ಜೀವನದಲ್ಲಿ, ಸಾಧನೆಯ ಮೂಲಕ ಸಮರ್ಪಿಸಿ, ಅನುಗ್ರಹೀತರಾಗೋಣ ಎಂದು, ಶ್ರೀಮದ್ ಉತ್ತರಾದಿಮಠದ, ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಧಾರವಾಡದ 31ನೇ ಚಾತುರ್ಮಾಸದಲ್ಲಿ, ತಮ್ಮ ಆಶೀರ್ವಚನದಲ್ಲಿ ತಿಳಿಸಿದರು.

<><><>

ಸಾವಿರ ಹಾಡುಗಳ ಸರದಾರ, ಹುಕ್ಕೇರಿ ಬಾಳಪ್ಪನವರ ದತ್ತಿ ಕಾರ್ಯಕ್ರಮ, ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ, ಜರುಗಿತು. ಹಿರಿಯ ಚಿಂತಕ, ಬೆಳಗಾವಿ ಜಿಲ್ಲೆ, ಗೋಕಾಕ ತಾಲೂಕು, ಯರಗಟ್ಟಿಯ, ಅಶೋಕ ಹಾದಿಮನಿ, ಹುಕ್ಕೇರಿ ಬಾಳಪ್ಪನವರ, ವ್ಯಕ್ತಿತ್ವ ಮತ್ತು ಕೃತಿತ್ವದ ಕುರಿತು, ಮಾತನಾಡಿದರು.

<><><>

ಹಿರಿಯ ಸಂಶೋಧಕರಾಗಿದ್ದ, ಡಾಕ್ಟರ್ ಎಂ.ಎಂ. ಕಲಬುರಗಿ ಅವರ, 11ನೇ ಹುತಾತ್ಮ ದಿನಾಚರಣೆಯನ್ನು, ಡಾಕ್ಟರ್ ಎಂ.ಎಂ. ಕಲಬುರ್ಗಿ ರಾಷ್ಟ್ರೀಯ ಪ್ರತಿಷ್ಠಾನ, 30ನೇ ತಾರೀಖು, ಬೆಳಗ್ಗೆ 10 ಗಂಟೆಗೆ, ಧಾರವಾಡದ ಆಲೂರು ವೆಂಕಟರಾವ ಸಾಂಸ್ಕೃತಿಕ ಭವನದಲ್ಲಿ, ಆಯೋಜಿಸಿದೆ.

'ಕನ್ನಡ ಸಂಶೋಧನ ಮಾರ್ಗ ಸಂಪುಟ –2' ಗ್ರಂಥವನ್ನು, ಹಿರಿಯ ವಿದ್ವಾಂಸ ಡಾಕ್ಟರ್ ಶಾಂತಿನಾಥ ದಿಬ್ಬದ, ಬಿಡುಗಡೆ ಮಾಡಲಿದ್ದಾರೆ. ಪ್ರತಿಷ್ಟಾನದ ಅಧ್ಯಕ್ಷ ಡಾಕ್ಟರ್ ವೀರಣ್ಣ ರಾಜೂರ, ಅಧ್ಯಕ್ಷತೆ ವಹಿಸಲಿದ್ದಾರೆ.

<><><>

17 ವರ್ಷದ ಅಪೂರ್ವ ಕಾಂಬ್ಳೆ, ಬೆಂಗಳೂರಿನಲ್ಲಿ ನಡೆದ, *ರೋಡ್ ಟು ಜಿ.ಸಿ.ಎಲ್., ಫಿಡೆ ರೇಟೆಡ್, ರ್‍ಯಾಪಿಡ್ ಚೆಸ್ ಟೂರ್ನಿಯಲ್ಲಿ*, ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. 700 ಕ್ಕೂ ಹೆಚ್ಚು ಆಟಗಾರರು ಭಾಗವಹಿಸಿದ್ದ ಟೂರ್ನಿಯನ್ನು, *ಗ್ಲೋಬಲ್ ಚೆಸ್ ಲೀಗ್* ಸಂಯೋಜಿಸಿತ್ತು. ಸಮ್ಮೇದ ಜಯಕುಮಾರ 2ನೇ ಸ್ಥಾನದೊಂದಿಗೆ, ರನ್ನರ್ಸ್ ಅಪ್ ಹಾಗೂ ವೈದಾನಾಥನ್ ಕಣ್ಣನ್, 3ನೇ ಸ್ಥಾನ ಗಳಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.